# ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿ ಕಾರ್ಮಿಕರ ಸಮಸ್ಯೆಗಳು

**ವೆಂಕಟೇಶ್ ಬಿ. ಜಿ.**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

Article Link: https://aksharasurya.com/2024/04/venkatesh-b-g.php

DOI: https://doi.org/10.5281/zenodo.10930259

## ABSTRACT:

ಕೃಷಿ ಕಾರ್ಮಿಕರು ಕೃಷಿ ಕ್ಷೇತ್ರದಲ್ಲಿ ಬೆಳೆ ನಾಟಿ, ಜಾನುವಾರುಗಳ ಪಾಲನೆ, ಕೊಯ್ಲು ಮತ್ತು ಸಂಸ್ಕರಣೆ ಮುಂತಾದ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಕೃಷಿ ಚಟುವಟಿಕೆಯಲ್ಲಿ ಮಾನವ ಸಂಪನ್ಮೂಲವು ಅವಶ್ಯಕವಾಗಿ ಅಗತ್ಯವಿರುತ್ತದೆ. ಈ ಹಿನ್ನೆಲೆ ಕೃಷಿ ಕಾರ್ಮಿಕರು ದೀರ್ಘಾವಧಿವರೆಗೆ ವ್ಯವಸಾಯ ಭೂಮಿಯಲ್ಲಿ ದುಡಿಯುತ್ತಿರುತ್ತಾರೆ. ಅವರು ಕಾಲಾವಧಿ ಅಥವಾ ತಾತ್ಕಾಲಿಕ ಅವಧಿಯ ಆಧಾರದ ಮೇಲೆ ಕೆಲಸ ಮಾಡಬಹುದು. ಅಲ್ಲದೆ ಕೃಷಿಕರು ಅಥವಾ ಕೃಷಿ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯವನ್ನು ನಿರ್ವಹಿಸಬಹುದು. ಕೃಷಿ ಕಾರ್ಮಿಕರ ಸವಾಲುಗಳು ಮತ್ತು ಅನಿಶ್ಚಿತತೆಯ ಹೊರತಾಗಿಯೂ ಇದು ಜಾಗತಿಕ ಆಹಾರ ಉತ್ಪಾದನೆಯ ನಿರ್ಣಾಯಕ ಅಂಶವಾಗಿದೆ. ಪ್ರಪಂಚದ ಅನೇಕ ಭಾಗಗಳಲ್ಲಿ ಕೃಷಿ ಕಾರ್ಮಿಕರು ಅನೌಪಚಾರಿಕ ಮತ್ತು ಅನಿಯಂತ್ರಿತರಾಗಿದ್ದಾರೆ. ಅವರು ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸುವುದು ಅವಶ್ಯಕವಾಗಿದೆ. ಇಡೀ ದೇಶದ ಉತ್ಪಾದನಾ ವ್ಯವಸ್ಥೆಗೆ ಕೃಷಿ ಕಾರ್ಮಿಕರ ಕೊಡುಗೆಯು ಅನನ್ಯವಾದುದು. ಇಂತಹ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಅದಕ್ಕೆ ಪರಿಹಾರ ಕ್ರಮಗಳನ್ನು ಸೂಚಿಸುವುದು ಈ ಲೇಖನದ ಆಶಯವಾಗಿದೆ.

## KEYWORDS:

ಉತ್ಪಾದನೆ, ಶ್ರಮಿಕ ವರ್ಗ, ಭೂ ಮಾಲೀಕ, ಗೇಣಿದಾರ, ದಿನಗೂಲಿ.

ವಿಶಾಲವಾದ ಬೆಂಗಳೂರು ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಆಗಸ್ಟ್ 15, 1986ರಲ್ಲಿ ಬೆಂಗಳೂರು ಕೇಂದ್ರವಾಗಿಟ್ಟುಕೊಂಡು ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕುಗಳನ್ನು ಒಳಗೊಂಡ ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ನಗರದ ಸುತ್ತಲಿನ ವೃತ್ತಾಕಾರವಾಗಿ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ ತಾಲ್ಲೂಕುಗಳನ್ನು ಸೇರಿಸಿ ಒಟ್ಟು ಎಂಟು ತಾಲ್ಲೂಕುಗಳನ್ನು ಒಳಗೊಂಡ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ರಚನೆಯಾಯಿತು. ನಂತರ ಆಗಸ್ಟ್ 23, 2007ರಲ್ಲಿ ಗ್ರಾಮಾಂತರ ಜಿಲ್ಲೆಯಲ್ಲಿನ ನಾಲ್ಕು ತಾಲ್ಲೂಕುಗಳಾದ ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ ತಾಲ್ಲೂಕುಗಳನ್ನು ಸೇರಿಸಿ ರಾಮನಗರ ಜಿಲ್ಲೆ ಎಂದು ರಚಿಸಲಾಯಿತು. ನಂತರ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಎಂಬ ನಾಲ್ಕು ತಾಲ್ಲೂಕುಗಳನ್ನು ಒಳಗೊಂಡ ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯವಸಾಯ ಸಂಸ್ಕೃತಿಯಲ್ಲಿ ಕೃಷಿ ಕಾರ್ಮಿಕರು ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಭೂ ಮಾಲೀಕರಲ್ಲದ ವರ್ಗವು ಆಹಾರ ಮತ್ತು ಹಣದ ಅವಶ್ಯಕತೆಯಿಂದ ಕೃಷಿಯಲ್ಲಿ ಕೂಲಿ ಕಾರ್ಮಿಕರಾಗಿ ಪರಿವರ್ತಿತರಾಗಿರುತ್ತಾರೆ. ಆರ್ಥಿಕ ಸಮಸ್ಯೆಗಳು ಬದುಕಿನ ನಿರ್ವಹಣೆಗೆ ಅಡಚಣೆಯನ್ನು ಸೃಷ್ಟಿಸುತ್ತವೆ. ಕೃಷಿ ಕಾರ್ಮಿಕರು ಹಸಿವು ಮತ್ತು ದಾರಿದ್ರ್ಯ ಸ್ಥಿತಿಯ ಪರಿಣಾಮವಾಗಿ ಭೂ ಮಾಲೀಕರ ಜಮೀನಿನಲ್ಲಿ ಜೀತದಾಳು ಅಥವಾ ಗೇಣಿದಾರರಾಗಿ ದುಡಿಯುವ ಪರಿಸ್ಥಿತಿಯು ಎದುರಾಗಿದೆ. ವ್ಯಾಪಕವಾದ ಭೂಮಿಯನ್ನು ವ್ಯವಸಾಯ ಕಾರ್ಯಕ್ಕೆ ಒಳಪಡಿಸುವ ಮತ್ತು ನಿರ್ದಿಷ್ಟ ಪ್ರದೇಶದ ಭೂಮಿಯನ್ನು ತೀವ್ರವಾಗಿ ಕೃಷಿ ಚಟುವಟಿಕೆಗೆ ಬಳಸುವ ಮೂಲಕ ವ್ಯವಸಾಯೋತ್ಪನ್ನಗಳ ಉತ್ಪಾದನೆಯಲ್ಲಿ ಪ್ರಗತಿಯನ್ನು ಸಾಧಿಸಬಹುದು. ಆದಾಗ್ಯೂ ಉತ್ಪಾದನೆಯ ಹೆಚ್ಚಳದ ಧ್ಯೇಯವನ್ನು ಪರಿಪೂರ್ಣಗೊಳಿಸುವ ನೆಲೆಯಲ್ಲಿ ಕೃಷಿಯ ವ್ಯಾಪಕತೆ ಮತ್ತು ತೀವ್ರವಾದ ಎನ್ನುವ ಎರಡು ವಿಧಾನಗಳಿಗೂ ನೀರಾವರಿ ಸೌಲಭ್ಯದ ಅಗತ್ಯವಿರುತ್ತದೆ. ಏಕೆಂದರೆ ಭೂಮಿಯ ಫಲವತ್ತತೆಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿ ನೀರಾವರಿ ವ್ಯವಸ್ಥೆಯು ಪ್ರಧಾನವಾದ ಅಂಶವಾಗಿರುತ್ತದೆ.

ಸಾಂಪ್ರದಾಯಿಕ ಅಥವಾ ಆಧುನಿಕ ವ್ಯವಸಾಯ ಪದ್ಧತಿಯಲ್ಲಿ ಶ್ರಮ ವಿನಿಯೋಗದ ಮೂಲಕ ಉತ್ಪಾದನೆಯ ಮಾಡಲಾಗುತ್ತದೆ. ಸಾಂಪ್ರದಾಯಿಕ ಕೃಷಿಯಲ್ಲಿ ಕಾರ್ಮಿಕರ ಅವಶ್ಯಕತೆಯು ತುಲನಾತ್ಮಕವಾಗಿ ಅಧಿಕವಾದ ಮತ್ತು ಬಂಡವಾಳದ ದೃಷ್ಟಿಯಿಂದ ಅಲ್ಪ ಪ್ರಮಾಣದ ಪಾತ್ರವನ್ನು ನಿರ್ವಹಿಸುತ್ತದೆ.

ಕೃಷಿಯಲ್ಲಿ ತಾಂತ್ರಿಕ ವ್ಯವಸ್ಥೆಯ ರೂಪಾಂತರದನ್ವಯ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕಾರ್ಮಿಕ ಆಧಾರಿತ ಬೆಳೆಗಳ ಬೇಸಾಯ ಕ್ರಮದ ಆಯ್ಕೆಯು ಚಾಲ್ತಿಯಲ್ಲಿದೆ. ಇದು ಕಾರ್ಮಿಕರ ಸಮಗ್ರ ಬಳಕೆಗಾಗಿ ರೂಪುಗೊಂಡ ಮಾದರಿಯುತ ವಿಧಾನವಾಗಿದೆ. ವ್ಯವಸಾಯವು ಅಭಿವೃದ್ಧಿಯಾಗಲು ಮತ್ತು ರೈತರು ಕೃಷಿಯಿಂದ ಲಾಭವನ್ನು ಪಡೆಯಲು ಕೃಷಿ ಕಾರ್ಮಿಕರ ನಿರಂತರ ದುಡಿಮೆ ಅಗತ್ಯವಾಗಿರುತ್ತದೆ. ಈ ಕಾರ್ಮಿಕ ವರ್ಗವು ಎದುರಿಸುವ ಪ್ರಮುಖ ಸಮಸ್ಯೆಗಳ ವಿವರವು ಮುಂದಿನಂತಿದೆ.

ಕೃಷಿ ಕಾರ್ಮಿಕರು ಭೂ ಒಡೆತನನವನ್ನು ಹೊಂದಿರುವುದಿಲ್ಲ. ಭೂ ರಹಿತತೆಯಿಂದಾಗಿ ಗೇಣಿ ವ್ಯವಸ್ಥೆಯು ಮನ್ನಣೆಯನ್ನು ಪಡೆದುಕೊಂಡಿದೆ. ಇದರಿ ಂದಾಗಿ ಗ್ರಾಮೀಣ ಭಾಗದ ಇತರೆ ಪ್ರದೇಶಗಳಿಗೆ ವಲಸೆ ಹೋಗಿ ಕೃಷಿಯಲ್ಲಿ ದಿನಗೂಲಿ ಕಾರ್ಮಿಕರಾಗಿ ದುಡಿಯುವಂತಹ ಹೀನಾಯವಾದ ಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಕೃಷಿಯಲ್ಲಿ ಬೆಳೆಯ ಬಿತ್ತನೆ ಮತ್ತು ಕಟಾವಿನ ಋತುಗಳಲ್ಲಿ ಕೃಷಿ ಕಾರ್ಮಿಕರಿಗೆ ಅಗಾಧವಾದ ಬೇಡಿಕೆಯು ಉದ್ಭವಿಸುತ್ತದೆ. ದಿನ ನಿತ್ಯ ಕಡಿಮೆ ಪ್ರಮಾಣದ ಕೂಲಿಯನ್ನು ವೇತನದ ರೂಪದಲ್ಲಿ ಕಾರ್ಮಿಕರು ಪಡೆದುಕೊಳ್ಳುತ್ತಿದ್ದರು. ಕೃಷಿ ಚಟುವಟಿಕೆ ಇಲ್ಲದ ಸಮಯದಲ್ಲಿ ಕಾರ್ಮಿಕರು ನಿರುದ್ಯೋಗಿಗಳಾಗಿರುತ್ತಾರೆ. ಕೃಷಿ ಕಾರ್ಮಿಕರು ದಿನನಿತ್ಯದ ಕೆಲಸಕ್ಕಾಗಿ ಹೆಚ್ಚಾಗಿ ಮಧ್ಯವರ್ತಿಗಳು ಮತ್ತು ಗುತ್ತಿಗೆದಾರರನ್ನು ಅವಲಂಬಿಸಿರುತ್ತಾರೆ.

ಕೃಷಿ ಕಾರ್ಮಿಕರು ಭೂಮಿಯ ವಿಘಟನೆ, ಭೂ ಮಾಲೀಕರ ದಬ್ಬಾಳಿಕೆಯ ಸಂಸ್ಕೃತಿ, ಹಸಿವು–ದಾರಿದ್ರ್ಯ, ಸಂಕುಚಿತವಾದ ಸಾಮಾಜಿಕ ವ್ಯವಸ್ಥೆಗಳಿಂದ ಕುಪಿತರಾಗಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಉದ್ಯೋಗವನ್ನು ಅರಸಿ ಇತರೆ ಭಾಗಗಳಿಂದ ಜನರು ಸಾಮೂಹಿಕವಾಗಿ ವಲಸೆ ಬಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಲೆಸಿದ್ದಾರೆ. ಇವರು ಆಧುನಿಕ ಕೃಷಿ ವ್ಯವಸ್ಥೆಯಲ್ಲಿ ನಿರಂತರವಾಗಿ ದುಡಿಯುತ್ತಾ ಕನಿಷ್ಠ ಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ. ಬಹುತೇಕವಾಗಿ ಕೃಷಿ ಕಾರ್ಮಿಕರು ಮೂಲಭೂತ ಸೌಲಭ್ಯವಾದ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಅಲ್ಲದೆ ಕಾರ್ಮಿಕರು ಭೂ ಮಾಲೀಕರ ಸಾಲದ ಸುಳಿಯಲ್ಲಿ ನರಳಾಡುತ್ತಿದ್ದಾರೆ.

ಕೃಷಿ ಕಾರ್ಮಿಕರು ನಿರ್ದಿಷ್ಟವಾದ ಬೆಳೆಯ ಬೇಸಾಯ ಕಾರ್ಯವನ್ನು ಅವಲಂಬಿಸಿರುತ್ತಾರೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಕಾರ್ಮಿಕರು ಅನೌಪಚಾರಿಕ ಮತ್ತು ಅನಿಯಂತ್ರಿತರಾಗಿದ್ದಾರೆ. ಕಾರ್ಮಿಕರಿಗೆ ಕಾನೂನಿನ ರಕ್ಷಣೆ ಮತ್ತು ಆರೋಗ್ಯ ಪಾಲನೆಯ ಸೌಲಭ್ಯಗಳು ಇರುವುದಿಲ್ಲ. ಕೃಷಿ ಕಾರ್ಮಿಕರಲ್ಲಿ

ಮಹಿಳೆಯರು ಗಣನೀಯ ಪ್ರಮಾಣದಲ್ಲಿದ್ದಾರೆ. ಕೃಷಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಅಶಕ್ತರಾಗಿರುತ್ತಾರೆ. ಕೃಷಿ ಚಟುವಟಿಕೆಯಲ್ಲಿ ಬಳಸಲಾಗುವ ಯಂತ್ರಗಳಿಂದ ಕೆಲವೊಮ್ಮೆ ಕಾರ್ಮಿಕರು ಗಾಯಾಳುಗಳಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ಕೃಷಿಯಲ್ಲಿ ಹೆಚ್ಚು ಇಳುವರಿಯನ್ನು ಪಡೆಯುವ ಉದ್ದೇಶದಿಂದ ಬಳಸಲಾಗುವ ರಾಸಾಯನಿಕಗಳಿಂದ ನಾನಾ ರೋಗಗಳಿಗೆ ಕಾರ್ಮಿಕರು ತುತ್ತಾಗುತ್ತಾರೆ. ಕೃಷಿ ಕಾರ್ಮಿಕರಲ್ಲಿ ಸಾಮಾನ್ಯವಾಗಿ ಸಂಘಟನೆ ಮತ್ತು ಪ್ರಾತಿನಿಧ್ಯದ ಕೊರತೆ ಇರುತ್ತದೆ.

ಸಾಮಾನ್ಯವಾಗಿ ಕೃಷಿ ಕಾರ್ಮಿಕರು ಅನಿಶ್ಚಿತ ಸ್ಥಳಗಳಲ್ಲಿ ಕಡಿಮೆ ವೇತನ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಈ ಸ್ಥಳದಲ್ಲಿ ಉಂಟಾಗುವ ಲಿಂಗ ತಾರತಮ್ಯ, ಸಂಪನ್ಮೂಲಗಳ ಕೊರತೆ ಮತ್ತು ಶೈಕ್ಷಣಿಕ ಅಸಮಾನತೆಯು ಕಾರ್ಮಿಕ ಜೀವನವನ್ನು ಮತ್ತಷ್ಟು ದುಸ್ತರಗೊಳಿಸಿದೆ. ಕೃಷಿ ಕಾರ್ಮಿಕರ ಉದ್ಯೋಗವು ಅಸ್ಥಿರವಾಗಿರುತ್ತದೆ. ಅವರು ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ ಕಾರ್ಯವನ್ನು ನಿರ್ವಹಿಸುತ್ತಾರೆ. ಇಲ್ಲಿ ಅವರಿಗೆ ಸೂಕ್ತವಾದ ಆರೋಗ್ಯ, ಶಿಕ್ಷಣ, ಸಾರಿಗೆ ಮತ್ತು ಇತರೆ ಸೌಲಭ್ಯಗಳು ಸರಿಯಾಗಿ ದೊರಕುವುದಿಲ್ಲ.

ಹೀಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರು ಈ ಪೂರ್ವದಲ್ಲಿ ಉಲ್ಲೇಖಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೃಷಿ ಈ ವರ್ಗದ ಜೀವನಾಧಾರದ ಕಸುಬಾಗಿದೆ. ಆದರೆ ವ್ಯವಸ್ಥೆಯಲ್ಲಿ ತಾರತಮ್ಯ ನೀತಿಯಿಂದ ಭೂ ಮಾಲೀಕ ಮತ್ತು ಹಣದ ಲೇವಾದೇವಿಗಾರರ ವಿಷವರ್ತುಲದಲ್ಲಿ ಸಿಲುಕಿದ್ದಾರೆ. ಜಾಗತಿಕ ಮಟ್ಟದಲ್ಲಿ ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವ ಕೃಷಿ ಕಾರ್ಮಿಕರು ಜೀವನವು ಅತಂತ್ರವಾಗಿರುವುದು ವಿಷಾದನೀಯ ಸಂಗತಿಯಾಗಿದೆ.

## ಪರಾಮರ್ಶನ ಗ್ರಂಥಗಳು:


1. ಅರುಣಿ ಎಸ್. ಕೆ. (2019). ಬೆಂಗಳೂರು ಪರಂಪರೆ. ಇತಿಹಾಸ ದರ್ಪಣ ಪ್ರಕಾಶನ. ಬೆಂಗಳೂರು.
2. ಆನಂದ ಎಸ್. (2020). ಕರ್ನಾಟಕ ರಾಜ್ಯ ರೈತ ಸಂಘ ತಾತ್ವಿಕ ಪ್ರಶ್ನೆಗಳು (1970–2010). ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ. ಬೆಂಗಳೂರು.
3. ಕೃಷ್ಣಯ್ಯ ಎಂ. ಎಚ್. ಮತ್ತು ವಿಜಯಾ. (2008). ಬೆಂಗಳೂರು ದರ್ಶನ: ಸಂಪುಟ–1 ಮತ್ತು 2. ಉದಯಭಾನು ಕಲಾ ಸಂಘ. ಬೆಂಗಳೂರು.
4. ಗೋವಿಂದಯ್ಯ ಜಿ. (2014). ಕರ್ನಾಟಕದಲ್ಲಿ ರೈತ ಹೋರಾಟಗಳಲ್ಲಿ ಆರ್ಥಿಕ ಅಭಿವೃದ್ಧಿಯ ಆಶಯಗಳು: ಒಂದು ಅಧ್ಯಯನ 1950–2000. ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ. ಬೆಂಗಳೂರು.
5. Kuppaswamy J. R. (1975). Economic Conditions in Karnataka. Karnataka University. Dhrawad.
6. Suryanath U. Kamath. (1989). Bangalore Rural District Gazetteer of India. Government Press. Bangalore.